

ಮರಳ ಮೇಲೆ ಬಿದ್ದು ಬದುಕಿ ಉಳಿದವ. ಅದು ಹೇಗೋ ಕ್ಲೀನರ್ ಆಗಿ, ಕೊನೆಗೆ ಆ್ಯಂಬುಲೆನ್ಸ್ ಡ್ರೈವರನಾಗಿದ್ದ. ಇಂಥ ವಿಜಿ, ಕೆಲದಿನಗಳಿಂದ ನಾಪತ್ತೆಯಾಗಿದ್ದ. ಮೊಬೈಲ್ ನಮ್ಮ ವ್ಯಾಪ್ತಿ ಪ್ರದೇಶದ ಹೊರಗೆ.

ಅಸಲು ವಿಷಯವೇನೆಂದರೆ, ಸಾಲದ ಕಂತು ಕಟ್ಟದೆ ಹೋದುದಕ್ಕೆ ಫೈನಾನ್ಸ್‌ನವರು ಅವನ ಗಾಡಿ ಎತ್ತಿ ಹಾಕಿಕೊಂಡು ಹೋಗಿದ್ದರು. ಕಳೆದ ಮೂರು ತಿಂಗಳಿನಿಂದ ಕಾಂಟ್ರಾಕ್ಟ್ ಟ್ರಾವೆಲ್ಸ್‌ನವರು ಸಂಬಳ ಒದಗಿಸಿಲ್ಲ. ಅಥವ ಸರ್ಕಾರದಿಂದ ಅವರಿಗೆ ದುಡ್ಡು ಬಂದಿಲ್ಲ. ಟೂರಿಸ್ಟ್ ಗಾಡಿ (ಟೆಂಪೋ ಟ್ರಾವೆಲ್ಸ್) ಮಾಡಿಕೊಂಡು ಮುತ್ತತ್ತಿ, ಸಂಗಮ, ಮೇಕೆದಾಟು, ಅಯ್ಯಪ್ಪ ಸ್ವಾಮೀ, ಅಂತ ಝೂಮಾಗಿ ಬರ್ಕಲೀ ಸಿಗರೇಟು ಸೇದುತ್ತ ಹಾಯಾಗಿದ್ದ ವಿಜಿ, ಕೊರೊನಾ ಸಂದರ್ಭದಲ್ಲಿ ತನ್ನ ಟಿ.ಟಿ. ಗಾಡಿ ಆಲ್ಟರೇಷನ್ ಮಾಡಿ ಆ್ಯಂಬುಲೆನ್ಸ್ ಮಾಡಿದ್ದ. ಮತ್ತು ಆ ಆ್ಯಂಬುಲೆನ್ಸ್‌ನಲ್ಲೇ ಅವನ ಒಂದೆರಡು ಜೊತೆ ಮಾಸಿದ ಬಟ್ಟೆ, ಟಾಯ್ಲೆಟ್ಟಿಗೆ ಹೋಗಲು ಬಳಸುವ ಹವಾಯಿ ಚಪ್ಪಲಿ, ಮತ್ತು ಡ್ಯೂಟಿ ಸಮಯದಲ್ಲಿ ಹಾಕಿಕೊಳ್ಳಲೆಂದು ಹ್ಯಾಂಗರಿಗೆ ನೇತಾಡುತ್ತಿದ್ದ ಅವನ ಬಿಳಿಯ ಅಂಗಿಯಂತಹ ಯೂನಿಫಾರ್ಮ್ ಇದ್ದವು. ಗಾಡಿಯೊಂದಿಗೆ ಇವೆಲ್ಲವನ್ನೂ ಫೈನಾನ್ಸ್‌ನವರು ನಿರ್ದಯವಾಗಿ ಎತ್ತಿಕೊಂಡು ಹೋದರೇ ಎಂದು ಯೋಚಿಸುತ್ತ ಕುಳಿತಿರಲು...

ಅಂದಹಾಗೆ, ಗಾಡಿ ವಿಜಿಯ ಸ್ವಂತದ್ದಲ್ಲ. ಆದರೂ ಸ್ವಂತ ಗಾಡಿಯಂತೆಯೇ ಇಟ್ಟುಕೊಂಡು ರಾಜ್ಯೋತ್ಸವಕ್ಕೆ, ಆಯುಧಪೂಜೆಗೆ ನೇಮ ತಪ್ಪದಂತೆ ಗಾಡೀ ಪೂಜೆಯ ಮಾಡಿ, ಧ್ವಜವ ಕಟ್ಟಿಕೊಂಡು ಸಂಭ್ರಮಿಸಿದವನು. ತನ್ನದಲ್ಲದ ಗಾಡಿಯನ್ನು ತನ್ನದೆಂಬಂತೆ ಪ್ರೀತಿಸಿ ಕಾಲ ಕಾಲಕ್ಕೆ ಸರ್ವೀಸು ಮಾಡಿಸಿ ಟೂರಿಷ್ಟು ಟ್ರಿಪ್ಪು ಹೊಡೆಯುತ್ತಿದ್ದ ವಿಜಿಗೆ ಕೊರೊನಾ ಸಂದರ್ಭ, ಗಾಡಿಯ ಕಿಟಕಿಗಳಿಗೆ ದುರಂತ ನಾಟಕಗಳ ಪರದೆಗಳನ್ನು ಇಳಿಸಬೇಕಾಯಿತು. ಮಾರುಕಟ್ಟೆಯಲ್ಲಿ ಆ್ಯಂಬುಲೆನ್ಸ್ ಬೇಡಿಕೆ ಅರಿತ ಕಂತ್ರಾಟುದಾರ ವಿಜಿಗೆ ತುಸು ದುಡ್ಡು ಕೊಡಿಸಿ, ಕಿಟಕಿಯ ಬಣ್ಣ ಬಣ್ಣದ ಗುಡ್ಡ ಬೆಟ್ಟ ಹಸಿರು ಕಾನನದ ಪರದೆಗಳ ತೆಗೆಸಿ, ಶ್ವೇತ ಶುಭ್ರ ಕಫನ್ ಕಲರಿನ ಸೂತಕದ ಬಿಳಿ ಪರದೆ ಇಳಿಬಿಟ್ಟ.

ಸಮಯಕ್ಕೆ ಸರಿಯಾಗಿ ಇಲಾಖೆಯ ದುಡ್ಡು ಕಂತ್ರಾಟುದಾರನಿಗೆ ಪಾವತಿಯಾಗಿದ್ದರೂ ಅವನ ಕಷ್ಟಗಳೇನಿದ್ದವೋ ಏನೋ? ಮೀಟರು ಬಡ್ಡಿಯ ಫೈನಾನ್ಸ್ ವ್ಯವಹಾರದ ಸಾಲದ ಸುಳಿಗಳನ್ನು ಅನುಭವಿಸಿದವರೇ ಬಲ್ಲರು.

***

ಬೆಳಿಗ್ಗೆಯಿಂದ ಎರಡು ಸಾವು, ಕೊರೊನಾ ಟೆಸ್ಟುಗಳು, ವ್ಯಾಕ್ಸಿನೇಷನ್ನು ಟಾರ್ಗೆಟ್, ಡೆತ್ ಅಡಿಟ್ ರಿಪೋರ್ಟ್, ಎಂದು ತಲೆಬಿಸಿಯಲ್ಲಿದ್ದರೂ ವಿಜಿಯ ಗೈರುಹಾಜರಿ ಕಾಡುತ್ತಲೇ ಇರುವಾಗ, ಕಳ್ಳ ವಿಜಿ ಆ ಕಡೆಯಿಂದ ಫೋನು ಮಾಡಿ ಮಾತನಾಡಿದಾಗ ಜೀವ ಬಂದಂತಾಗಿತ್ತು. 'ಎಲ್ಲಿದ್ದೀಯೋ ವಿಜಿ' ಎಂದೆ. 'ಇಲ್ಲೇ ಸರ್. ಅದೇ ಸ್ಮಶಾನ' ಅಂದ. ಕರುಳು ಚುರ್ ಅಂತು... 'ಮನೆಗೆ ಹೋಗಲ್ಲವೇನೋ' ಅಂದೆ. 'ಮನೆಯಲ್ಲಿ ಅಣ್ಣನ ಚಿಕ್ಕ ಮಕ್ಕಳು ಸಾರ್. ಅವರನ್ನು ದೂರದಿಂದಲೇ ನೋಡಿ ಮಾತನಾಡಿಸಿ ಬಂದೆ ಸಾ... ಗೊತ್ತಲ್ಲ ಸರ್ ನಿಮಗೂ, ನಾವು ಕೊರೊನಾ ಕೇಸು ಹೊಡೆಯುವವರು... ಪಾಪ! ಮಕ್ಕಳಿದ್ದಾರೆ ಸಾರ್ ಮನೆಯಲ್ಲಿ' ಅಂದ.

ನಿಮಗೆ ಗೊತ್ತಿದೆಯೋ ಇಲ್ಲವೋ ಕೊರೊನಾದ ಡ್ಯೂಟಿ ಮಾಡುವ ನನ್ನನ್ನೂ ಸೇರಿಸಿ ನಮ್ಮ ಸಿಬ್ಬಂದಿಯೂ ಮನೆಯಲ್ಲಿ ಮಕ್ಕಳೊಂದಿಗೆ, ಉಳಿದ ಸದಸ್ಯರೊಂದಿಗೆ ಆದಷ್ಟು ಸುರಕ್ಷಿತ ಅಂತರವಿಟ್ಟುಕೊಂಡು ಬದುಕುತ್ತಿದ್ದೇವೆ. ನನಗಂತೂ ಇದೊಂದು ತ್ಯಾಗ, ನಿಷ್ಠೆ, ಹಾಳೂ ಮೂಳೂ ಏನೂ ಅಲ್ಲ. ಜಾಗೃತ ಮನಸಿನ ಕೊರೊನಾದ ಭಯ ಅಷ್ಟೇ.

ಈ ವಿಜಿ ನಮಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಮನೆಗೇ ಹೋಗಿಲ್ಲ. ಇಂದೋ ನಾಳೆಯೋ ಕಂತ್ರಾಟುದಾರ ಗಾಡಿ ಬಿಡಿಸಿಕೊಡುತ್ತಾನೆ. ಇವನೂ ಕೆಲಸಕ್ಕೆ ಬರುತ್ತಾನೆ... ಸದ್ಯಕ್ಕೆ ವಿಜಿಯ ಪ್ರಾರ್ಥನೆ ಏನು ಗೊತ್ತಾ? 'ಬೆಂಗಳೂರಿನ ಈ ಐ.ಟಿ.–ಬಿ.ಟಿ. ಕಂಪನಿ ತೆರೆಯುವ ತನಕ ಕೊರೊನಾ ಡ್ಯೂಟಿ ಹೋಗದಿರಲಿ ದೇವರೇ!'

ವಿಜಿ ಓರ್ವ ವ್ಯಕ್ತಿಯಲ್ಲ, ದೇಶದ ಅಸಂಖ್ಯ ಜನರ ಪ್ರತಿನಿಧಿಯಂತೆ ನನಗೆ ಕಾಣಿಸುತ್ತಾನೆ. ಲಾಕ್ ಡೌನ್ ಸಮಯದಲ್ಲಿ ಬಸ್ಸು ಅಟೋಗಳಿಲ್ಲದಾಗ, ಲಗ್ಗೇಜು ಗಾಡಿ ಹತ್ತಿ ಡ್ಯೂಟಿಗೆ ಬರುವ ತಂಗಿಯಂತಹ ಶಾಹಿನ್ ಸಿಸ್ಟರ್, ಕೋವಿಡ್ ರೋಗಿ ಎಷ್ಟೇ ದೂರದಲ್ಲಿದ್ದರೂ ಮ್ಯಾರಾಥಾನ್ ಓಟ ಓಡಿ ಹಿಡಿದು ಕಸ್ಟಡಿಗೆ ಒಪ್ಪಿಸುವ ಆಶಾ ಕಾರ್ಯಕರ್ತೆಯರು, ಸೆಕ್ಯುರಿಟಿಯವರು, ಆಸ್ಪತ್ರೆಯ ಆಯಾಗಳು, ಇವರೆಲ್ಲ ನಿಜದ ಹೀರೋಗಳೇ.

ಈ ನಡುವೆ ಸಹಾಯಕ್ಕೆ ನಿಂತ ಎಷ್ಟೊಂದು ಕರುಣೆಯ ಕೈಗಳು, ಪ್ರಾರ್ಥಿಸುವ ತುಟಿಗಳು, ಮಿಡಿವ ಹೃದಯಗಳು... ಕಲ್ಲುಗಳೂ ಕರಗುವ ಸಮಯವಿದು.

ಕಷ್ಟಗಳು ನಮ್ಮನ್ನು ಕರಗಿಸಲಿ, ನಮ್ಮನ್ನು ಬಾಗಿಸಲಿ ಮಾಗಿಸಲಿ, ಇನ್ನು ಸ್ವಲ್ಪವೇ ದಿನ, ಎಲ್ಲವೂ ಸರಿ ಹೋಗಲಿದೆ ಎನ್ನುವ ಆಶಾಭಾವ ನಮ್ಮ ಕೈಬಿಡದಿರಲಿ. ಆಮ್ಲಜನಕ, ವ್ಯಾಕ್ಸಿನೇಷನ್, ಹೊಟ್ಟೆ ತುಂಬ ಊಟ, ಕಣ್ಣು ತುಂಬ ನಿದ್ದೆ, ಮತ್ತು ಮುಖದ ಮೇಲಿನ ಮೊದಲಿನ ನಗೆ ಮತ್ತೆ ಮರುಕಳಿಸಲಿದೆ. ಪ್ರವಾಹದ ಈ ಸೆಳೆವಿನಲ್ಲಿ ಸಿಕ್ಕ ಒಂದು ಕಲ್ಲೋ ಕಟ್ಟಿಗೆಯ ತುಂಡನ್ನೋ ಗಟ್ಟಿಯಾಗಿ ಹಿಡಿಯೋಣ. ಆ ನಂಬಿಕೆಯೇ ಆತ್ಮವಿಶ್ವಾಸವೇ ಜೀವನಿಡೀ ನಮ್ಮನ್ನು ಕೈ ಹಿಡಿದು ನಡೆಸುತ್ತದೆ.

'ಸುಖವೇ ಶಾಶ್ವತವಲ್ಲ, ಇನ್ನು ದುಃಖ ಯಾವ ಲೆಕ್ಕ' ಅಂತ ಗಾಲಿಬ್ ಒಂದು ಕಡೆ ಕೇಳುತ್ತಾನೆ. ಸದ್ಯ, ಬದುಕಿನ ಟೈಟಾನಿಕ್ ಹಡಗಿಗೆ ಮಂಜಿನ ಹೆಬ್ಬಂಡೆಯೊಂದು ತಾಗಿ ಎಲ್ಲರೂ ಮುಳುಗುವ ಭಯದಲ್ಲಿ ಜೀವ ಹಿಡಿದು ಬದುಕುತ್ತಿರುವುದೇನೋ ನಿಜ. ಆದರೆ ಟೈಟಾನಿಕ್ ಮುಳುಗಿ ನೂರು ವರ್ಷಗಳ ಮೇಲಾಯಿತು. ಫೆಸಿಫಿಕ್ ಸಾಗರದಲ್ಲಿ ಕೋಟಿ ಕೋಟಿ ಹೊಸ ಅಲೆಗಳು ಟೈಟ್ಯಾನಿಕ್‌ನ ಮೈ ಸವರಿ ಹೋಗಿವೆ.

ಅನಾಥ ಅಲೆಗೆಂದೇ ಪ್ರತ್ಯೇಕ ದಡವೊಂದಿದೆ. ಉದ್ವಸ್ಥ ಕಡಲಿಗೂ ನಿರಾಳ ಅಲೆಯುಸಿರಾಟದ ಕನಸಿದೆ... ಇನ್ನೇನು ಹಿಮದ ಮಂಜು ಜಗದ ನಿಟ್ಟುಸಿರಿನ ಬಿಸಿಗೇ ಕರಗಿ ಹೋಗಲಿದೆ... ಎಲ್ಲ ಸರಿ ಹೋಗಲಿದೆ.

ಪ್ಲೇಗು, ಕಾಲರಾ, ಯುದ್ಧ, ಸುನಾಮಿ, ಭೂಕಂಪ... ಈ ಜಗತ್ತು ಎಷ್ಟೆಲ್ಲ ಅಗ್ನಿದಿವ್ಯಗಳ ಹಾಯ್ದು ಮತ್ತೆ ಹೊಸದಾಗಿದೆ. ಈ ಸಂಕಟದ ಸಮಯವೂ ಸರಿದು ಹೋಗಲಿದೆ.

ಪ್ರತಿಕ್ರಿಯಿಸಿ: **feedback@sudha.co.in**